ವರ್ಷ	ಲಾಭ	ನಷ್ಟ (ಲಕ್ಷ ರೂ.ಗಳಲ್ಲಿ)
೨೦೦೨-೦೩	-	೫೪೧.೯೧
೨೦೦೩-೦೪	-	೧೩೭.೩೮
೨೦೦೪-೦೫	-	೨೯೬.೨೧

೩೯೦೩ (೪೭೫೨) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :- ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳು ಎಷ್ಟು;

ಆ) ಇದರಲ್ಲಿ ಚಾಲನೆಯಲ್ಲಿರುವ ಹಾಗೂ ಚಾಲನೆಯಲ್ಲಿ ಇರದ ಕೈಗಾರಿಕೆಗಳೆಷ್ಟು;

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಕೊಡಬೇಕಾಗಿರುವ ಸಬ್ಸಿಡಿ ಹಣ ಬಾಕಿ ಎಷ್ಟು;

ಈ) ಬಾಕಿ ಇರುವ ಸಬ್ಸಿಡಿ ಹಣವನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ದಿನಾಂಕ ೩೧.೫.೨೦೦೫ ರ ಅಂತ್ಯಕ್ಕೆ ೧೧,೯೩೦ ಸಣ್ಣ ಕೈಗಾರಿಕೆಗಳು ನೋಂದಾಯಿತವಾಗಿರುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ೧೭ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿರುತ್ತದೆ.

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ೬ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಿರುತ್ತವೆ. ೧೧ ಕೈಗಾರಿಕೆಗಳು ಚಾಲನೆಯಲ್ಲಿರುತ್ತದೆ. ತಿನೇ ಅಖಿಲ ಭಾರತ ಸಣ್ಣ ಕೈಗಾರಿಕೆಗಳ ಗಣತಿ ವರದಿ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ ೨೦೦೬ ಸಣ್ಣ ಕೈಗಾರಿಕೆಗಳು ಮುಚ್ಚಿರುತ್ತವೆ.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ದಿನಾಂಕ : ೩೧-೩-೦೫ ರ ಅಂತ್ಯಕ್ಕೆ ೬೧೮ ಘಟಕಗಳಿಗೆ ರೂ.೧೧.೮೪ ಕೋಟಿ ಸಹಾಯಧನ ಬಾಕಿ ಇರುತ್ತದೆ.

ಈ) ಬಾಕಿ ಇರುವ ಸಹಾಯಧನವನ್ನು ೨೦೦೫-೦೬ ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

೩೯೦೪ (೪೭೫೩) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಎಸ್.ಸಿ.ಎಸ್.ಟಿ. ವಸತಿ ನಿಲಯಗಳು ಹಾಗೂ ಬಿಸಿಎಂ ವಸತಿ ನಿಲಯಗಳು ಎಷ್ಟು; ಅವು ಯಾವುವು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ನೀಡುವುದು).

ಆ) ಈ ಪೈಕಿ ಮೊರಾರ್ಜಿ ದೇಸಾಯಿ ವಸತಿ ನಿಲಯಗಳೆಷ್ಟು; ಅವು ಯಾವುವು;

ಇ) ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಎಸ್.ಸಿ.ಎಸ್.ಟಿ ಮತ್ತು ಬಿಸಿಎಂ ವಸತಿ ನಿಲಯಗಳ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗಾಗಿ ೧೦೦ ಮೆಟ್ರಿಕ್ ಪೂರ್ವ ಮತ್ತು ೨೧ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು, ಹಿಂದುಳಿದ ವರ್ಗದವರಿಗಾಗಿ ೧೦೬ ಮೆಟ್ರಿಕ್ ಪೂರ್ವ ಮತ್ತು ೨೦ ಮೆಟ್ರಿಕ್ ನಂತರದ ನಿಲಯಗಳನ್ನು ಹಾಗೂ ಪರಿಶಿಷ್ಟ ವರ್ಗದವರಿಗೆ ೬ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ವಿಧಾನ ಸಭಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ೯ ವಸತಿ ಶಾಲೆಗಳಿದ್ದು, ಈ ಪೈಕಿ ೬ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಾಗಿರುತ್ತವೆ.

೧) ಅರ್ಜುನಗಿ	–	ಪ. ಜಾತಿ
೨) ಶಹಪುರ	–	ಪ. ಜಾತಿ
೩) ಲಿಂಗೇರಿ ಸ್ಟೇಷನ್	–	ಪ.ಜಾತಿ
೪) ಕೂಗನೂರು	–	ಹಿ.ವರ್ಗ
೫) ತಡಕಲ್	–	ಹಿ.ವರ್ಗ